# 6

# ದೇವರನ್ನು ನಂಬು

ಹೇಗೆ ಪ್ರಾರ್ಥಿಸಬೇಕು ಎಂಬುದನ್ನು ನಾವು ತಿಳಿದಿರುವುದಿಲ್ಲ ಎಂಬುದನ್ನು ನಾವು ಕಲಿತುಕೊಂಡಿದ್ದೇವೆ. ಕೆಲವು ಸಲ "ಹೆಚ್ಚು ಕಠಿಣವಾಗಿ" ನಾವು ಪ್ರಾರ್ಥಿಸಿದಂತೆ, ನಾವು ಹೆಚ್ಚು ನಿರಾಶರಾಗುತ್ತೇವೆ. "ಆತ್ಮಿಕ ಅಪಚನ ಹೊಂದುವಷ್ಟು ಕಠಿಣವಾಗಿ ಪ್ರಾರ್ಥಿಸುವದಕ್ಕೆ ಪ್ರಯತ್ನಿಸಬೇಡ" ಎಂದು ಮಾರ್ಟಿನ್ ಲೂಥರ್ ಸಂಕ್ಷಿಪ್ತವಾದ ಅವಲೋಕನ ಮಾಡಿದ್ದಾನೆ.

ನೀವು ಪ್ರಾರ್ಥನೆಯ ಬಗ್ಗೆ ಅನೇಕ ಸಂಗತಿಗಳನ್ನು ತಿಳಿದಿರಬಹುದು, ಆದರೆ ಪ್ರಾರ್ಥಿಸದೇ ಇರಬಹುದು. ಪ್ರಾರ್ಥಿಸುವದರಿಂದ ನಾವು ಪ್ರಾರ್ಥಿಸುವದನ್ನು ಕಲಿತು ಕೊಳ್ಳುತ್ತೇವೆ. ಪ್ರಾರ್ಥಿಸುವದರಲ್ಲಿ ಅತೀ ದೊಡ್ಡ ರೋಮಾಂಚನಗೊಳ್ಳುವಿಕೆಯು ನೀವು ಬಯಸುವಂಥದ್ದನ್ನು ಹೊಂದಿಕೊಳ್ಳುವುದು ಅಲ್ಲ, ಆದರೆ ನಿನ್ನ ಜೀವಿತದಲ್ಲಿ ಕೃತಿಯಲ್ಲಿ ದೇವರನ್ನು ನೋಡುವುದಾಗಿದೆ. ಪ್ರಾರ್ಥನೆಯಲ್ಲಿ ದೊಡ್ಡ ಆಶೀರ್ವಾದವು ನೀನು ಬಯಸಿದ್ದನ್ನು ಹೊಂದಿಕೊಳ್ಳುವಂಥದ್ದಲ್ಲ, ಆದರೆ ದೇವರನ್ನು ಹೊಂದಿಕೊಳ್ಳುವುದಾಗಿದೆ! ಪ್ರಾರ್ಥನೆಯಲ್ಲಿ ಬಲವು ದೇವರನ್ನು ಹೊಂದಿಕೊಂಡಿರುವುದು - ದೇವರ ಉತ್ತರಗಳನ್ನು ಕಂಡುಕೊಳ್ಳುವುದು ಮತ್ತು ದೇವರ ನಡಿಸುವಿಕೆಯು ಆಗಿರುತ್ತದೆ. *ಎಚ್ಚರಿಕೆ!* "ಜಿಪಿ" ಎಂಬುದು ಆಕಾಶದಲ್ಲಿ "ಹೋಗಿ ಸಾರು" ಎಂದು ಅರ್ಥ ಕೊಡದಿರಬಹುದು; ಅದು "ಹೋಗಿ ಉಳು" ಎಂದು ಅರ್ಥವಾಗಬಹುದು. ಉದ್ದೇಶಪೂರ್ವಕವಾದ ಆಜ್ಞೆಗಳು ಸುಮ್ಮನೇ ಕೈಕೊಳ್ಳಬೇಕು. ಕರ್ತೃಸಂಬಂಧವಾದದ್ದು ವಿಶ್ವಾಸಘಾತಕವಾದದ್ದಾಗ ಬಹುದು. ಮಿಶನ್ನುಗಳನ್ನು ಕಲಿತು, ಅತೀ ಬೆಲೆಯ ಕಟ್ಟಡಗಳನ್ನು ಕಟ್ಟಿಸುವದನ್ನು ಕುರಿತು ಹಾಗೂ ವೈಯಕ್ತಿಕ ಹಣಕಾಸನ್ನು ಕುರಿತು ಭಯಾನಕ ಕಥೆಗಳನ್ನು ನಾವೆಲ್ಲರೂ ತಿಳಿದಿದ್ದೇವೆ. ಸಂಕೇತಗಳನ್ನು ನಾವು ಓದುತ್ತೇವೆ, ಆದರೆ ತಪ್ಪಾಗಿ ಓದುತ್ತೇವೆ. ಆಗ ದೇವರನ್ನು ದೂಷಿಸುತ್ತೇವೆ ಮತ್ತು ಪ್ರಾರ್ಥನೆಯು ಒಂದು ಸೋಲೆಂದು ಯೋಚಿಸುತ್ತೇವೆ. ನಾನು ಹೆಚ್ಚು ಕಾಲ ಜೀವಿಸಿದಂತೆ, ದೇವರ ನಡಿಸುವಿಕೆಯನ್ನು ನೋಡುವುದು ಹೆಚ್ಚು ಕಠಿಣವಾದದ್ದಾಗುತ್ತದೆ! ದೇವರ ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸಿರಿ. ದೇವರ ಮಾರ್ಗದರ್ಶನವನ್ನು ಹುಡುಕಿರಿ. ಆಗ ಮೆಲ್ಲನೇ ಮುಂದುವರಿಯಿರಿ. ದೂರದರ್ಶನದ ಪ್ರಸಂಗಿಗಳು ನನ್ನನ್ನು ಭಯಪಡಿಸುತ್ತಾರೆ. ಸಾಕ್ಷಿಗಳು ನನ್ನನ್ನು ಆಘಾತಕ್ಕೊಳ ಪಡಿಸುತ್ತವೆ! ಅವರು ಪ್ರಾರ್ಥಿಸುತ್ತಾರೆ, ಮತ್ತು ದೇವರು "ಕಪ್ಪು ಹಾಗೂ ಬಿಳುಪಿನಲ್ಲಿ" ಕೂಡಲೇ ಉತ್ತರಕೊಡುತ್ತಾನೆ. ಇದು ನನ್ನ ಅನುಭವವಾಗಿರುವದಿಲ್ಲ - ಕೆಲವು ಸಲ ನಾನು ಕಠಿಣವಾಗಿ ನೋಡುವಾಗ, ಕಡಿಮೆಯಾದದ್ದನ್ನು ನಾನು ನೋಡುತ್ತೇನೆ. ದೇವರ ನಡಿಸುವಿಕೆ ಎಂದು ತೋರುವಂಥದ್ದು "ಗಾಳಿಪಟಕ್ಕಿಂತ ಹೆಚ್ಚು ಎತ್ತರವಾಗಿ ಉಬ್ಬಿಸಲ್ಪಡುತ್ತದೆ." ಸಂಕೇತಗಳಲ್ಲಿ ನಮ್ಮ ಸ್ವಾರ್ಥ ಚಿತ್ತಗಳನ್ನು ಓದುವುದು ಬಹಳ ಸುಲಭವಾಗಿರುತ್ತದೆ.

ಸರಿಯಾದ ಪರಿಸ್ಥಿತಿಗಳ ಅಧೀನತೆಯಲ್ಲಿ ವಿವರಿಸದೇ ಇದ್ದ ಪ್ರಭಾವಗಳು ನಮಗೆ ತೀರ್ಮಾನಗಳನ್ನೂ ಜ್ಞಾನವನ್ನೂ ಕೊಡುತ್ತವೆ, ಆದರೆ ಅವು ಪರಿಶುದ್ಧ ಬರಹಗಳಂತೆ ಬಿದ್ದು ಹೋಗದ ಮಾರ್ಗದರ್ಶನಗಳಾಗಿರುವದಿಲ್ಲ. ಕರ್ತೃ ಸಂಬಂಧವಾದದ್ದು ಬಿದ್ದುಹೋಗುವಂಥದ್ದೂ ನಾಜೂಕಾದದ್ದೂ ಆಗಿರುತ್ತದೆ ... ಜಾಗರೂಕತೆಯಿಂದ

ಕಾಪಾಡಿಕೊಳ್ಳಿರಿ. ನಾವು ಅನುಭವಿಸುವಂಥ ಯಾವುದೂ ತಪ್ಪು ತಡೆಯುವಂಥದ್ದಾಗಿರುವದಿಲ್ಲ. ಭಾವನೆಗಳು ಎಂದೂ ಯೋಚನೆಗಾಗಿಯೂ ವಿವೇಕಕ್ಕಾಗಿಯೂ ಪರ್ಯಾಯವಾಗಿ ಮಾಡಲ್ಪಡಬಾರದು. ಯಾವುದಕ್ಕಾಗಿಯಾದರೂ ಒಳ್ಳೆಯದಾಗಿ ಭಾವಿಸುವುದು, ಅದನ್ನೇ ನಾವು ಮಾಡಬೇಕಾಗಿರುವುದು ಎಂದು ಅರ್ಥವಾಗುವದಿಲ್ಲ. ಪ್ರಾರ್ಥನೆಯಲ್ಲಿ ಯಾವುದೂ ಯಾಂತ್ರಿಕವಾಗಿರುವದಿಲ್ಲ.

ನಿಮ್ಮ ಪ್ರಾರ್ಥನೆಗಳನ್ನು ಸ್ಪಷ್ಟವಾಗಿ ಮಾಡಿರಿ. ನೀವು ನಿರೀಕ್ಷಿಸುವ ಉತ್ತರವನ್ನು ಸ್ಪಷ್ಟವಾಗಿ ಮಾಡಿಕೊಳ್ಳಿರಿ. ಹೀಗಿದ್ದರೂ, ಕೆಲವೊಂದು ಭಿನ್ನವಾದದ್ದು ಸಂಭವಿಸಿದರೂ, ದೇವರು ಕೇಳುತ್ತಿರುವದಿಲ್ಲ ಎಂದು ಅವರ ಅರ್ಥವಾಗುವದಿಲ್ಲ. ನೀವು ಇನ್ನೂ ಕೆಲವೊಂದನ್ನು ಕಲಿಯಬೇಕು. ಪರಿಶುದ್ಧ ಬರಹಗಳನ್ನು ಹುಡುಕಿರಿ. ದೇವರನ್ನು ಆಲಿಸಿರಿ. ಪ್ರಾರ್ಥನೆಯು ಮಾತಾಡುವಷ್ಟು ಕೇಳುವುದೂ ಆಗಿದೆ. ದೇವರ ಮಾರ್ಗದರ್ಶನಕ್ಕಾಗಿ ಹುಡುಕಿರಿ. ದೀನತೆಯಲ್ಲಿ ವಿಧೇಯರಾಗಿರಿ. ಭಾವೋದ್ರೇಕಗಳಿಂದ ನಡಿಸಲ್ಪಡಲು ನಿಮ್ಮನ್ನು ಬಿಡಬೇಡಿರಿ. ಅಲ್ಲಿ ಇರದಂಥ ಸಂದೇಶಗಳನ್ನು ನೋಡಬೇಡಿರಿ.

ದೇವರ ಮಾರ್ಗದರ್ಶನವನ್ನು ಕಂಡುಕೊಳ್ಳಲಿಕ್ಕೆ ನಮ್ಮ ಸರಳ ಉತ್ತರವು "ಕುರಿಯ ತುಪ್ಪಟವನ್ನು ಹೊರಗಿಡುವುದು." ನ್ಯಾಯಸ್ಥಾಪಕರು 6:36-40ನ್ನು ಪುನ ಅಧ್ಯಯನ ಮಾಡಿರಿ. ಕಾರ್ಯಮಾಡಲು ಗಿದ್ಯೋನನು ದೇವರಿಂದ ಕರೆಯಲ್ಪಟ್ಟನು. ತಾನು ಏನು ಬಯಸಿದ್ದೇನೆಂಬುದನ್ನು ದೇವರು ಗಿದ್ಯೋನನಿಗೆ ಸ್ಪಷ್ಟವಾಗಿ ಹೇಳಿದನು. ವಿವಾದವು ದೇವರ ಮಾರ್ಗದರ್ಶನವಾಗಿರಲಿಲ್ಲ. ವಿಷಯವು ವಿಧೇಯತೆಯಾಗಿತ್ತು! ಗಿದ್ಯೋನನು ದೇವರ "ನಿಧಾನವಾಗಿ ಕಲಿಯುವವರ ಕ್ಲಾಸಿನಲ್ಲಿ" ಒಬ್ಬ ವಿಶೇಷ ವಿದ್ಯಾರ್ಥಿಯಾಗಿದ್ದನು! ಪಾಠವು ಗಿದ್ಯೋನನ ಕುರಿಯ ತುಪ್ಪಟವಾಗಿರಲಿಲ್ಲ, ಆದರೆ ದೇವರ ತಾಳ್ಮೆಯಾಗಿತ್ತು. ಗಿದ್ಯೋನನು ಆಗಲೇ ಒಬ್ಬ ದೇವದೂತನಿಂದ ಕರೆಯಲ್ಪಟ್ಟಿದ್ದನು. ದೇವರು ಆಗಲೇ ಅದ್ಭುತ ಕಾರ್ಯಗಳನ್ನು ಮಾಡಿದ್ದನು. *ಕುರಿಯ ತುಪ್ಪಟವು ಸಂಶಯವನ್ನು ಪ್ರದರ್ಶಿಸಿತು, ಆದರೆ ನಂಬಿಕೆಯನ್ನಲ್ಲ.*

ಹೀಗಿದ್ದರೂ, ಗಿದ್ಯೋನನನ್ನು ಕಠಿಣವಾಗಿ ತೀರ್ಪುಗೊಳಪಡಿಸಬೇಡಿರಿ. ಸಮಯಗಳು ನಿಜವಾಗಿಯೂ ಕಠಿಣವಾಗಿದ್ದವು. ದೇವರು ಎಲ್ಲಿ ಇದ್ದನು? ಗಿದ್ಯೋನನು "ಅಜ್ಞಾನಿಯಾದ ಯಾವನೋ" ಆಗಿದ್ದನು. ಅವನು ಭಯಪಡಿಸಲ್ಪಟ್ಟಿದ್ದನು. ಅವನು ಪ್ರಾಮಾಣಿಕನಾಗಿದ್ದನು.

ಕೀರ್ತನೆಗಳು ಇನ್ನೂ ನಮ್ಮ ಪ್ರಾರ್ಥನಾ ಪುಸ್ತಕವಾಗಿದೆ. ಆತ್ಮಿಕ ಪ್ರರ್ಥನೆಯು ಅರ್ಥಹೀನ ಭಕ್ತಿಯ ಸೋಗು ಆಗಿರುವದಿಲ್ಲ. ನಿಜವಾದ ಪ್ರಾರ್ಥನೆಯು ನೋವುಳ್ಳ ಮನುಷ್ಯನ ಯಥಾರ್ಥವಾದ ಭಾವನೆಗಳಾಗಿರುತ್ತದೆ. ಗಿದ್ಯೋನನು ತನ್ನನ್ನು ನಂಬಿಕೊಳ್ಳದಷ್ಟು ದೇವರಲ್ಲಿ ಅವಿಶ್ವಾಸಪಡಲಿಲ್ಲ. ಕುರಿಯ ತುಪ್ಪಟವು ನಮ್ಮ ಸಮಸ್ಯೆಗಳನ್ನು ಪರಿಹರಿಸುವದಿಲ್ಲ. ವಿಶ್ವಾಸ ಮತ್ತು ವಿಧೇಯತೆ ಪರಿಹರಿಸುತ್ತವೆ. ಈಜುವದಕ್ಕೆ ಒಬ್ಬನಿಗೆ ಕಲಿಸುವುದು, ನೀರಿನ ಗಂಡಾಂತರವನ್ನು ಒಳಗೊಂಡಿರುತ್ತದೆ. ಗಿದ್ಯೋನನು ದೇವರನ್ನು ಅಷ್ಟು ಚೆನ್ನಾಗಿ ತಿಳಿದಿರಲಿಲ್ಲ. "ನಿನ್ನ ಎಲ್ಲಾ ಪ್ರಾರ್ಥನೆಗಳಲ್ಲಿಯಕ್ಕಿಂತ ಪ್ರಾಮಾಣಿಕವಾದ ಸಂಶಯದಲ್ಲಿ ಹೆಚ್ಚು ನಂಬಿಕೆಯಿರುತ್ತದೆ." ನಂಬಿಕೆಯು ಕುರುಡಾಗಿರುವದಿಲ್ಲ. ಪ್ರಾರ್ಥನೆಯು ದಂತ ಕಥೆಯಾಗಿರುವದಿಲ್ಲ. ದೇವರಿಗೆ ಉಪಯೋಗಿಸಲು ಯಾರೂ "ಅಲ್ಪರಾಗಿರುವದಿಲ್ಲ" - ಆದರೆ ಒಬ್ಬನು "ಅತೀ ದೊಡ್ಡವನಾಗಿರಬಹುದು" ಎಂಬುದನ್ನು ಗಿದ್ಯೋನನು ಕಲಿತುಕೊಳ್ಳಬೇಕಾಗಿತ್ತು. ದೇವರನ್ನು ನಂಬು, ಭಾವನೆಗಳನ್ನಲ್ಲ. ಅನೇಕರು "ತೋರಿಸಿಕೊಳ್ಳುವದನ್ನು" ಬಯಸುತ್ತಾರೆ, ಆದರೆ "ಪ್ರದರ್ಶಿಸುವದನ್ನು" ಅಲ್ಲ. ದೇವರ ಚಿತ್ತವು ದೇವರ ಕೃಪೆಯು ನಿನ್ನನ್ನು ಇಟ್ಟುಕೊಳ್ಳದ ಸ್ಥಳಕ್ಕೆ ನಿನ್ನನ್ನು

ನಡಿಸುವದಿಲ್ಲ. ಪ್ರಾರ್ಥನೆಯನ್ನು ಶವಸಂಸ್ಕಾರದಂತೆ ಮೊದಲೇ ವ್ಯವಸ್ಥೆಮಾಡಲು ಪ್ರಯತ್ನಿಸಬೇಡ. ನಿನಗೆ ಉತ್ತರಗಳು ಇರದೇ ಇರಬಹುದು, ಆದರೆ ನಿನಗೆ ದೇವರು ಇರುತ್ತಾನೆ.

◇◇◇◇◇◇◇◇◇

# ಪರಾರ್ಥ ಪ್ರಾರ್ಥನೆ

## ಲೂಕ 22:31-34

*" 'ಆದರೆ ನಿನ್ನ ನಂಬಿಕೆ ಕುಂದಿ ಹೋಗಬಾರದೆಂದು ನಾನು ನಿನ್ನ ವಿಷಯದಲ್ಲಿ ದೇವರಿಗೆ ವಿಜ್ಞಾಪನೆ ಮಾಡಿಕೊಂಡೆನು. ನೀನು ತಿರುಗಿಕೊಂಡ ಮೇಲೆ ನಿನ್ನ ಸಹೋದರರನ್ನು ದೃಢಪಡಿಸು' " (ಲೂಕ 22:32).*

ಹೇಗೆ ಪ್ರಾರ್ಥನೆ ಮಾಡಬೇಕೆಂದು ನಾನು ತಿಳಿದಿರುವದಿಲ್ಲ. ನಾನು ತಿಳಿದಿದ್ದರೆ, ಬಹುಶಃ ನಾನು ಪ್ರಾರ್ಥಿಸುವ ಅವಶ್ಯಕತೆಯಿರಲಿಲ್ಲ. ಹೇಗೆ ಪ್ರಾರ್ಥಿಸಬೇಕೆಂದು ನಾನು ತಿಳಿದಿರುವದಿಲ್ಲ; ಆದುದರಿಂದ, ಹೇಗೆ ಪ್ರಾರ್ಥಿಸಬೇಕೆಂಬುದನ್ನು ನಿಮಗೆ ಹೇಗೆ ಬೋಧಿಸಬೇಕೆಂಬುದು ನನಗೆ ತಿಳಿದಿರುವದಿಲ್ಲ. ನಾನು ಏನನ್ನೂ ತಿಳಿದಿರುವದಿಲ್ಲ; ನಾನು ಏನು ಮಾಡಬೇಕೆಂಬುದರ ಬಗ್ಗೆಯೂ ಸಹ ನಾನು ತಿಳಿದಿರುವದಿಲ್ಲ. *ಪರಾರ್ಥ ವಿಜ್ಞಾಪನೆಗಾಗಿ* ನಮಗೆ ಅವಕಾಶವಿರುವದೆಂಬುದನ್ನು ನಾನು ತಿಳಿದುಕೊಂಡಿದ್ದೇನೆ: ನಾವು ಒಬ್ಬರಿಗೋಸ್ಕರ ಒಬ್ಬರು ಪ್ರಾರ್ಥಿಸಬಹುದು. ಇದು ಭಯ *ಭಕ್ತಿಯುಳ್ಳದ್ದಾಗಿದೆ*!

ನಾನು ದೇವರೊಂದಿಗೆ ಮಾತಾಡಬಹುದು.
ನಾನು ದೇವರೊಂದಿಗೆ ನಿನ್ನ ಬಗ್ಗೆ ಮಾತಾಡಬಹುದು.
ನಿನಗಾಗಿ ಮಾಡಬಹುದಾದ ಅತಿದೊಡ್ಡ ಸಂಗತಿಯು
  ನಿನಗಾಗಿ ಪ್ರಾರ್ಥಿಸುವುದು.

*ಆಶ್ಚರ್ಯಕರವಾದದ್ದು!* ಈ ಪಾಠವು ಹೃದಯವನ್ನು ಮತ್ತು ಪ್ರಾರ್ಥನೆಯಲ್ಲಿ ಸಮಸ್ಯೆಯನ್ನು - ಇತರರಿಗಾಗಿ ವಿಜ್ಞಾಪನೆಯನ್ನು ಒಳಗೊಂಡಿರುತ್ತದೆ. ಪರಾರ್ಥ ವಿಜ್ಞಾಪನೆಯು ಇನ್ನೊಬ್ಬನ ಪರವಾಗಿ ಬೇರೊಬ್ಬನಿಗಾಗಿ ಬೇಡಿಕೊಳ್ಳುವುದು. "ನಾನು ಬಹಳ ಬಲಹೀನಳಾಗಿರುವದರಿಂದ, ನಾನು ಬೇರೆಯವರಿಗಾಗಿ ಪ್ರಾರ್ಥಿಸುತ್ತೇನೆ. ಅವರು ಬಹಳ ಕೊರತೆಯಲ್ಲಿದ್ದಾರೆ ಮತ್ತು ದೇವರು ಪ್ರಾರ್ಥನೆಗೆ ಉತ್ತರ ಕೊಡುತ್ತಾನೆ" ಎಂದು ಒಬ್ಬ ಮಹಿಳೆ ಬುದ್ಧಿವಂತಿಕೆಯಿಂದ ಗಮನಿಸಿದಳು. ಆಮೆನ್! ನನ್ನ ಪ್ರಾರ್ಥನೆಯು ನಿನ್ನನ್ನು ಹೇಗೆ ಬದಲಾಯಿಸಬಹುದು? ಇದು ವೈಯಕ್ತಿಕ ಸ್ವಾತಂತ್ರ್ಯವನ್ನು ಉಲ್ಲಂಘಿಸುವುದೋ? ಪರಾರ್ಥ ಪ್ರಾರ್ಥನೆಯು ದೇವರ ಸಾರ್ವಭೌಮತೆಯನ್ನು ಮತ್ತು ಬಿದ್ದುಹೋದ ಮನುಷ್ಯನ ಉನ್ನತ ಉದ್ದೇಶಗಳನ್ನು ಒಳಗೊಂಡಿರುತ್ತದೆ. ಇತರರಿಗಾಗಿ ಪ್ರಾರ್ಥಿಸುವುದು ಆಳವಾದದ್ದು, ಪರಹಿತವಾದದ್ದು, ಭಾವನಾತ್ಮಕವಾದದ್ದು ಸ್ವಾರ್ಥರಹಿತವಾದ ಕೃತ್ಯವೂ ಆಗಿರುತ್ತದೆ. ಇದು ದೇವರು ಮತ್ತು ಮನಷ್ಯನು ಇಬ್ಬರೂ ತಮ್ಮ ಅತ್ಯುತ್ತಮವಾದದ್ದರಲ್ಲಿ ಇದ್ದಾರೆ! ಅತಿದೊಡ್ಡ

ಪ್ರಾರ್ಥನೆಯು "ನನಗೆ - ಕೊಡು" ಎಂಬ ನಮಗಾಗಿರುವ ಯಾದಿ ಆಗಿರುವದಿಲ್ಲ, ಆದರೆ ಇತರರಿಗಾಗಿ ಯಥಾರ್ಥವಾದ ಪ್ರಾರ್ಥನೆಯಾಗಿರುತ್ತದೆ. ನಿಮ್ಮ ಪ್ರಾರ್ಥನೆಗಳ ಸಮೀಕ್ಷೆ ಮಾಡಿಕೊಳ್ಳಿರಿ. ಅವು ನಿಮಗಾಗಿ ಇರುವವೋ ಇಲ್ಲವೇ ಇತರರಿಗಾಗಿಯೋ? ಪರಾರ್ಥ ಪ್ರಾರ್ಥನೆಗಳು ನಮ್ಮ ಬಹಳ ಉತ್ಸುಕವಾದ ಪ್ರಾರ್ಥನೆಗಳಾಗಿರುತ್ತವೆ. ಇತರರಿಗಾಗಿ ಬೇಡಿಕೊಳ್ಳುವುದು ಬಲವಾದ ಬೇರುಗಳೊಂದಿಗೆ ಒಂದು ಪುರಾತನ ಪ್ರವೃತ್ತಿಯಾಗಿದೆ. ಅದು ನಮ್ಮ ಪ್ರಾಣಗಳ ಕ್ಷ-ಕಿರಣವಾಗಿದೆ. ನಾನು ನನ್ನನ್ನು ಬದಲಾಯಿಸಿಕೊಳ್ಳಲು ಸಿದ್ಧನಾಗಿರದೇ ಇರುವಾಗ, ಇತರರನ್ನು ಬದಲಾಯಿಸಲು ನಾನು ದೇವರನ್ನು ಹೇಗೆ ಬೇಡಿಕೊಳ್ಳಬಹುದು? ಈ ಕಾರಣದಿಂದ ಈ ಪಾಠಗಳನ್ನು ಬರೆಯುವುದು ಅಷ್ಟು ಕಠಿಣವಾದದ್ದಾಗಿತ್ತು. ಪ್ರಾರ್ಥನೆಯು ಕೇವಲ ಸಹಾಯಕ್ಕಾಗಿ ದೇವರನ್ನು ಬೇಡಿಕೊಳ್ಳುವದಾಗಿರುವದಿಲ್ಲ - ವೈಯಕ್ತಿಕ ಬದಲಾವಣೆಗಾಗಿ ಅದು ಒಂದು ಒಪ್ಪಿಸಿಕೊಡುವಿಕೆಯಾಗಿರುತ್ತದೆ.

> ದೇವರೇ, ಪ್ರಾರ್ಥಿಸಲು ನನಗೆ ಸಹಾಯಮಾಡು, ಯಾಕಂದರೆ,
> ನನ್ನಷ್ಟಕ್ಕೆ ನಾನೇ ಪ್ರಾರ್ಥಿಸಲಾರೆನು!

"ನನ್ನ ಸ್ವಂತದ್ದರ ಯಾವುದನ್ನೂ ನನ್ನಲ್ಲಿ ಬಿಡಬೇಡ." ಪರಾರ್ಥ ಪ್ರಾರ್ಥನೆಯು ಇತರರನ್ನು ಬದಲಾಯಿಸದೇ ಇರಬಹುದು, ಆದರೆ ಅದು ನನ್ನನ್ನು ಬದಲಾಯಿಸುವುದು. ನಾವು ಯಾಕೆ ಪ್ರಾರ್ಥನೆಯಲ್ಲಿ ಅಷ್ಟು ಅಲಕ್ಷ್ಯವುಳ್ಳವರಾಗಿರಬೇಕು? ನಿಕಟತೆಯ ನಮ್ಮ ಸಾಮಾನ್ಯ ಭಯವನ್ನು ಅದು ಪ್ರತಿಬಿಂಬಿಸುವುದು, ಅದು ತಿರುಗಿ ಆಳವಾದ ಸ್ನೇಹದ ನಮ್ಮ ಕೊರತೆಗೆ ಜವಾಬ್ದಾರಿಕೆಯುಳ್ಳದ್ದಾಗಿರುವುದು, ಮತ್ತು ಆತ್ಮಿಕ ಜೀವನಕ್ಕೆ ಪೋಷಣೆಯ ಕೊರತೆಗೆ ಕಾರಣವಾಗುವುದು. ಪರಾರ್ಥಪ್ರಾರ್ಥನೆಯು ದೊಡ್ಡ ಸ್ನೇಹತ್ವವನ್ನು ಕೇಳುತ್ತದೆ! ಮೃದುಭಾವ, ಅಂತ ಕರುಣೆ ಮತ್ತು ಪ್ರೀತಿ ಪರಾರ್ಥ ವಿಜ್ಞಾಪನೆಯನ್ನು ಕೇಳುತ್ತದೆ. ವಿವಾಹದ ಸಮಸ್ಯೆಗಳಲ್ಲಿ ಹೆಚ್ಚಾದವರು, "ನನ್ನ ಸಂಗಾತಿಯನ್ನು ದೇವರೇ ಮಾರ್ಪಡಿಸು" ಎಂದು ಪ್ರಾರ್ಥಿಸುವರು. ಯಥಾರ್ಥವಾದ ಪರಾರ್ಥ ಪ್ರಾರ್ಥನೆಯು "ದೇವರೇ, ನನ್ನನ್ನು ಬದಲಾಯಿಸು; ನನ್ನನ್ನು ಮೊದಲು ಬದಲಾಯಿಸು!" ಎಂದು ಹೇಳುತ್ತದೆ. "ನಿನ್ನ ಚಿತ್ತವು ನೆರವೇರಲಿ" ಎಂಬುದು ವಿರಕ್ತ ತ್ಯಜಿಸುವಿಕೆಯಾಗಿರುವದಿಲ್ಲ. ಪ್ರಾರ್ಥನೆಯು ಯಾಂತ್ರಿಕವಾಗಿ ಪರಿಸ್ಥಿತಿಗಳನ್ನು ಬದಲಾಯಿಸುವದಿಲ್ಲ. ದೇವರು ಮಾತ್ರ ಸಂಗತಿಗಳನ್ನು ಬದಲಾಯಿಸುತ್ತಾನೆ. ದೇವರು ಪರಿಸ್ಥಿತಿಗಳನ್ನು ಬದಲಾಯಿಸಬಲ್ಲನು; ನಮ್ಮನ್ನು ಬದಲಾಯಿಸಲು ಆತನು ಯಾವಾಗಲೂ ಸಂತೋಷವುಳ್ಳವನಾಗಿರುತ್ತಾನೆ. ಪ್ರಾರ್ಥಿಸುವುದು ಬದಲಾಗುವುದಾಗಿರುತ್ತದೆ. ನಿಜವಾದ ಪ್ರಾರ್ಥನೆಯು ಬೇರೇನೂ ಆಗಿರದೆ ಪ್ರೀತಿಯಾಗಿರುತ್ತದೆ. "ಚೆನ್ನಾಗಿ ಪ್ರಾರ್ಥಿಸುವವನು ಚೆನ್ನಾಗಿ ಪ್ರೀತಿಸುತ್ತಾನೆ."

ಲೂಕ 22:31-34ರಲ್ಲಿ, ಕ್ರಿಸ್ತನು ಪೇತ್ರನಿಗಾಗಿ ಪ್ರಾರ್ಥಿಸಿದನು. ಈ ಪ್ರಾರ್ಥನೆಯು ಪೇತ್ರನನ್ನು ಬೀಳುವದರಿಂದ ತಡೆಯಲಿಲ್ಲ, ಆದಾಗ್ಯೂ ಪೇತ್ರನು ಹಿಂದಿರುಗಿದನು. "ಕ್ರಿಸ್ತನು ಪೇತ್ರನಿಗಾಗಿ ಪ್ರಾರ್ಥಿಸಿದಂತೆ ಯೂದನಿಗಾಗಿ ಪ್ರಾರ್ಥಿಸಿದನೋ?" ಎಂಬುದು ಮುಂದಿನ ಪ್ರಶ್ನೆ. ಇದು ನಮ್ಮನ್ನು ಪರಾರ್ಥ ಪ್ರಾರ್ಥನೆಯ ಸಮಸ್ಯೆಯೊಳಗೆ ತರುತ್ತದೆ! ಪೇತ್ರನು ಬೀಳುವನು ಎಂಬುದನ್ನು ಪ್ರಕಟಿಸಿದಾಗ, ಪೇತ್ರನು ಬೀಳಬಾರದೆಂದು ಯೇಸುವು ಪ್ರಾರ್ಥಿಸಿದನು. ನಮ್ಮ ಅತಿದೊಡ್ಡ ಪ್ರಾರ್ಥನೆಗಳು ಇತರರಿಗಾಗಿ ಇರುತ್ತವೆ.

## ಪರಾರ್ಥ ಪ್ರಾರ್ಥನೆಗಳು ಪರಿಶುದ್ಧ ಬರಹಗಳಿಗನುಗುಣವಾಗಿವೆ

ಬೈಬಲಿನಲ್ಲಿ ಮೊದಲಿಗೆ, ಭಕ್ತಿವಂತ ಯೋಬನು ಪರಾರ್ಥಪ್ರಾರ್ಥನೆಯನ್ನು ಅರ್ಥಮಾಡಿಕೊಂಡನು ಮತ್ತು ರೂಢಿಸಿದನು. ಅವನು ಪ್ರತಿದಿನವೂ ತನ್ನ ಮಕ್ಕಳಿಗಾಗಿ ದೇವರಿಗೆ ಬೇಡಿಕೊಂಡನು (ಯೋಬ 1:5). ಯೋಬನ ಪ್ರಾರ್ಥನೆಯ ಮುಖಾಂತರ ಮಾತ್ರವೇ ದೇವರು ಅವನ ಮೂರು ಜನ ಸ್ನೇಹಿತರನ್ನು ಕ್ಷಮಿಸಿದನು (ಯೋಬ 42:7-9).

ಮೋಶೆಯ ಅಗಾಧವಾದ ಪ್ರಾರ್ಥನೆಗಳನ್ನು ನಾವೆಂದೂ ಮರೆಯತಕ್ಕದ್ದಲ್ಲ. ಅವನು ಅನೇಕ ಧೈರ್ಯದ ಗುಣಗಳಿಗಾಗಿ ಪ್ರಸಿದ್ಧನಾಗಿದ್ದಾನೆ - ಆದರೆ ಅವನ ಪ್ರಾರ್ಥನಾ ಜೀವಿತವು ಹೋಲಿಕೆಯನ್ನು ಮೀರಿ ಇರುವುದು. ನಿಮ್ಮ ಪ್ರಾರ್ಥನೆಗಳನ್ನು ಸುಧಾರಿಸಿ ಕೊಳ್ಳಲು, ಮೋಶೆಯನ್ನು ಅಧ್ಯಯನ ಮಾಡಿರಿ! ವಿಮೋಚನಕಾಂಡ 32ನೆಯ ಅಧ್ಯಾಯವು ಚಿರಸ್ಮರಣೀಯವಾದದ್ದಾಗಿದೆ! ಅದು ದೇವರನ್ನು ಪ್ರಕಟಿಸುತ್ತದೆ. ಅದು ಮೋಶೆಯನ್ನು ಪ್ರಕಟಿಸುತ್ತದೆ! ಅದು ಪ್ರಾರ್ಥನೆಯನ್ನು ಪ್ರಕಟಿಸುತ್ತದೆ! ಇಸ್ರಾಯೇಲ್ಯರು ಸಿನಾಯಿಬಳಿಯಲ್ಲಿ ದಂಗೆಯಿಂದ ಹಾಗೂ ಆರೋನನಿಂದ ಮಾಡಲ್ಪಟ್ಟ "ಬಂಗಾರದ ಕರುವಿನಿಂದ" ಪಾಪ ಮಾಡಿದರು. ಮನುಷ್ಯರು ಪಾಪಮಾಡಿದಾಗ ದೇವರ ಕೋಪವು ಪ್ರಕಟವಾಯಿತು. ದೇವರು ತನ್ನ ರೋಷದಲ್ಲಿ ಇಸ್ರಾಯೇಲ್ಯರನ್ನು ನಿರ್ನಾಮ ಮಾಡಿ, ಅಬ್ರಹಾಮನಿಂದಲ್ಲ ಆದರೆ ಮೋಶೆಯಿಂದ ಒಂದು ಹೊಸ ಜನಾಂಗವನ್ನು ಎಬ್ಬಿಸುವ ನೆಂದು ಮೋಶೆಗೆ ತಿಳಿಸಿದನು. ಇದು ವಿಚಾರ ಪ್ರಚೋದಕವಾದದ್ದಾಗಿತ್ತು. ಅಧಿಕಾರ, ಹುದ್ದೆಗಳು ಮತ್ತು ಬಹುಮಾನಗಳು - ಇವುಗಳನ್ನು ತಿರಸ್ಕರಿಸುವುದು ಕಠಿಣವಾದದ್ದಾಗಿದೆ. ರಾಜಕೀಯದಲ್ಲಿ "ಪೊಟೋಮ್ಯಾಕ್ ಫೀವರಿಗೆ" ವಾಸಿಯಾಗುವಿಕೆ ಇರುವದಿಲ್ಲ. ಮೋಶೆಯು ಧೈರ್ಯಗೊಂಡನು ... ಮೋಶೆಯು ಗಂಡಾಂತರಕ್ಕಿಟ್ಟು ಕೊಂಡನು ... ಮೋಶೆಯು ದೇವರನ್ನು "ಒಬ್ಬನ - ಮೇಲೆ - ಒಬ್ಬನನ್ನು" ತೆಗೆದುಕೊಂಡನು. (1) ಅವನು ಹೊಸ ಸ್ಥಿತಿಯನ್ನು ಸ್ವೀಕರಿಸುವದನ್ನು ನಿರಾಕರಿಸಿದನು. (2) ಅವನು ದೇವರಿಗೆ ಬೈಬಲನ್ನು ಉಲ್ಲೇಖಿಸಿದನು (ಒಂದು ಆಶ್ಚರ್ಯಕರವಾದ ವಿಧಾನ). ದೇವರಿಗೆ ಅವನು ಆತನ ವಾಗ್ದಾನವು ಅಬ್ರಹಾಮನಿಗೆ, ಇಸಾಕನಿಗೆ, ಮತ್ತು ಯಾಕೋಬನಿಗೆ ಇತ್ತೆಂದು ಜ್ಞಾಪಿಸಿದನು. (3) ಮೋಶೆಯು ದೇವರನ್ನು ಎಷ್ಟು ಅಗಾಧವಾಗಿ ತಿಳಿದುಕೊಂಡಿದ್ದನು! ಅವನು ಆತನಿಗೆ ಆತನ ಕೋಪದ ಬಗ್ಗೆ ಜಾಗರೂಕತೆಯಿಂದ ಇದ್ದು ಮನಸ್ಸನ್ನು ಬದಲಾಯಿಸಿಕೊಳ್ಳಬೇಕೆಂದು ಜ್ಞಾಪಿಸಿದನು! ಮನುಷ್ಯನು ದೇವರನ್ನು ಗದರಿಸಿದನು! (4) ದೇವರು ಬದಲಾದನು (ಮೋಶೆಯಲ್ಲ)! *ನಂಬಲಸಾಧ್ಯವಾದದ್ದು!* ಮೋಶೆಯು ಗೆದ್ದನು ಯಾಕಂದರೆ ಮೋಶೆಯಲ್ಲಿ ಸತ್ಯವಿತ್ತು ಹಾಗೂ ತನ್ನ ಜನರನ್ನು ಪ್ರೀತಿಸಿದನು. ಅವನ ಚಿಂತನೆಯು ದೇವರ ಘನತೆಗಾಗಿ ಮತ್ತು ಇಸ್ರಾಯೇಲ್ಯರ ರಕ್ಷಣೆಗಾಗಿ ಇತ್ತು. ಇದಲ್ಲದೇ, ಇಸ್ರಾಯೇಲು ಖಂಡಿಸಲ್ಪಟ್ಟಿತು, ಆ ಮೇಲೆ ರಕ್ಷಿಸಲ್ಪಟ್ಟಿತು; ಆದಾಗ್ಯೂ ಅವರು ದೇವರು ಮತ್ತು ಮೋಶೆಯ ಮಧ್ಯದಲ್ಲಿಯ ಸಂಭಾಷಣೆಯ ಬಗ್ಗೆ ಏನನ್ನೂ ತಿಳಿದಿರಲಿಲ್ಲ! ದೇವರು ಕೋಪದ ವ್ಯಾಪಕತೆಯನ್ನು ಅವರು ತಿಳಿದಿರಲಿಲ್ಲ, ಇಲ್ಲವೇ ಮೋಶೆಯ ಪ್ರಾರ್ಥನೆಯನ್ನು ಅವರು ಕೇಳಿಸಿಕೊಳ್ಳಲಿಲ್ಲ!

ಇತರರು ಪ್ರಾರ್ಥನೆಗಳಿಂದ ನಮ್ಮ ಜೀವಿತಗಳು ಎಷ್ಟರ ಮಟ್ಟಿಗೆ ತಟ್ಟಲ್ಪಟ್ಟಿವೆ? ನನಗಾಗಿ ಪ್ರಾರ್ಥಿಸಿರಿ! ಮೋಶೆಯು ತನ್ನ ಜನಾಂಗವನ್ನು ರಕ್ಷಿಸಿದ್ದಲ್ಲದೇ, ತನ್ನ ಸಹೋದರ ಆರೋನನ್ನೂ, ತನ್ನ ಸಹೋದರಿಗೆ ಮಿರಿಯಾಮಳನ್ನೂ, ಪ್ರಾರ್ಥನೆಯಿಂದ ಮೊದಲಿನ

ಸ್ಥಿತಿಗೆ ತಂದನು (ಅರಣ್ಯಕಾಂಡ 12:13). ಅರಣ್ಯಕಾಂಡ 14:13-19ರಲ್ಲಿ ಇಸ್ರಾಯೇಲನು ಮೋಶೆಯ ಪ್ರಾರ್ಥನೆಯಿಂದ ರಕ್ಷಿಸಲ್ಪಟ್ಟರು. ಅವರು ದಂಗೆಯೆದ್ದಾಗ ಮೋಶೆಯು ಪ್ರಾರ್ಥಿಸಿದನು - ಮತ್ತು ದೇವರು ಕ್ಷಮಿಸಿದನು. ಮೋಶೆಯು ಸೇವೆಯಲ್ಲಿ ಪ್ರಾರ್ಥನೆಯ ಇಪ್ಪತ್ತೈದು ಉದಾಹರಣೆಗಳನ್ನು ಓದುತ್ತೇವೆ.

ಎಜ್ರ ಮತ್ತು ನೆಹೆಮೀಯರು ತಮ್ಮ ಪಿತೃಗಳ ಮತ್ತು ತಮ್ಮ ಜನಾಂಗದ ಪಾಪಗಳನ್ನೂ ಅರಿಕೆ ಮಾಡಿದರು, ಆ ಮೇಲೆ ವಿಜ್ಞಾಪಿಸಿಕೊಂಡರು. ಯೇಸುವು ಪೇತ್ರನಿಗಾಗಿ ಪ್ರಾರ್ಥನೆ ಮಾಡಿದನು. ಆತನು ನಮಗಾಗಿ ವಿಜ್ಞಾಪನೆ ಮಾಡಲು ಯಾವಾಗಲೂ ಇರುತ್ತಾನೆ (ಇಬ್ರಿಯ 7:25). ಯೇಸು ಇನ್ನೂ ಪ್ರಾರ್ಥಿಸುತ್ತಾನೆ! ನಮಗಾಗಿಯೂ ಪ್ರಾರ್ಥಿಸುತ್ತಾನೆ! ಪಾಪಿಯಾದ ಮಂತ್ರವಾದಿ ಸೀಮೋನನಿಗಾಗಿ ಪ್ರಾರ್ಥಿಸಬೇಕೆಂದು ಪೇತ್ರನು ಕೇಳಿಕೊಳ್ಳಲ್ಪಟ್ಟನು (ಅಪೊಸ್ತಲರ ಕೃತ್ಯಗಳು 8:12-24). ವಿನೋದಪಡಿಸುವ ಒಂದು ಘಟನೆ ಅಪೊಸ್ತಲರ ಕೃತ್ಯಗಳು 12ರಲ್ಲಿ ಕಂಡುಬರುತ್ತದೆ. ಯಾಕೋಬನು ರಕ್ತಸಾಕ್ಷಿಯಾಗಿದ್ದನು, ಮತ್ತು ಪೇತ್ರನು ಸೆರೆಮನೆಯಲ್ಲಿ ಇದ್ದನು. ಸಹೋದರರು ಪ್ರಾರ್ಥಿಸಲು ಕೂಡಿಬಂದರು. ದೇವರು ಯಾಕೋಬನ ಮರಣಕ್ಕೆ ಒಪ್ಪಿದ್ದನು, ಆದರೆ ಆತನು ಪೇತ್ರನ ಮರಣವನ್ನು ತಡೆಹಿಡಿದನು. ಪೇತ್ರನು ಒಬ್ಬ ದೇವದೂತನಿಂದ ರಕ್ಷಿಸಲ್ಪಟ್ಟನು. ಪ್ರಾರ್ಥನೆಗಳು ಅರ್ಪಿಸಲ್ಪಡುತ್ತಿದ್ದ ಮನೆಗೇ ಅವನು ಹೋದನು. ಅವನು ಪೇತ್ರನೆಂದು ದಾಸಿಯು ಮಾತ್ರವೇ ನಂಬಿದಳು! ಪ್ರಾರ್ಥನೆಯಲ್ಲಿಯ ಕೆಲವು ನಿರ್ಣಯಿಸದೇ ಇದ್ದ ಸಮಸ್ಯೆಗಳನ್ನು ಇದು ಪ್ರದರ್ಶಿಸುತ್ತದೆ.

ಒಬ್ಬರಿಗೊಬ್ಬರು ನಮ್ಮ ತಪ್ಪುಗಳನ್ನು ಅರಿಕೆಮಾಡಲು ಮತ್ತು ಒಬ್ಬರಿಗೋಸ್ಕರ ಒಬ್ಬರು ಪ್ರಾರ್ಥಿಸಲು ಯಾಕೋಬನು ಹೇಳಿದನು (ಯಾಕೋಬ 5:13-16). ನಾವು ಸಭೆಯಾಗಿ ಮಾಡಬಲ್ಲ ಅತೀ ದೊಡ್ಡ ಕಾರ್ಯಾಚರಣೆಯ ಸಂಗತಿಯಾಗಿದೆ. ನಾವು ನಮ್ಮ ವೈರಿಗಳನ್ನು ಪ್ರೀತಿಸಬೇಕು ಮತ್ತು ಅವರಿಗಾಗಿ ಪ್ರಾರ್ಥಿಸಬೇಕು (ಮತ್ತಾಯ 5:43-48). ನಾವು ಪ್ರಸಂಗಿಗಳಿಗಾಗಿ ಪ್ರಾರ್ಥಿಸಬೇಕು (1 ಥೆಸಲೊನೀಕ 5:25). ಪ್ರಾರ್ಥನೆಯಿಲ್ಲದ ಬೆಂಚುಗಳು ಬಲವಿಲ್ಲದ ಪೀಠಗಳನ್ನು ಮಾಡುತ್ತವೆ. ಪ್ರಾರ್ಥಿಸುವ ನಾಯಕರು ಪ್ರಾರ್ಥಿಸುವ ಅನುಯಾಯಿಗಳನ್ನು ಕಟ್ಟುತ್ತಾರೆ.

ಜಗತ್ತಿಗಾಗಿ ಪ್ರಾರ್ಥಿಸಿರಿ. ಭಕ್ತಿಸಂಜೀವನಕ್ಕಾಗಿ ಪ್ರಾರ್ಥಿಸಿರಿ. ರೋಗಿಗಳಿಗಾಗಿ ಪ್ರಾರ್ಥಿಸಿರಿ. "ದೇವರೇ, ಅವರು ಯಾರು ಎಂಬುದನ್ನು ನೀನು ಬಲ್ಲವನಾಗಿದ್ದೀ" ಎಂದು ಬಹಳ ಸಾಮಾನ್ಯವಾಗಿ ಬಹಳ ಸಲ ಹೇಳುತ್ತೇವೆ. ಆತನು ಬಲ್ಲವನಾಗಿರುತ್ತಾನೆ! ನೀವು ನನಗಾಗಿ ಪ್ರಾರ್ಥಿಸುವಾಗ, ನನ್ನ ಹೆಸರನ್ನು ಹೇಳುವಿರೋ? ಇತರರಿಗಾಗಿ ನಾವು ಮಾಡದೇ ಇರುವಂಥದ್ದು, ಅವರಿಗಾಗಿ ಪ್ರಾರ್ಥಿಸುವದಕ್ಕಿಂತ ಹೆಚ್ಚು ಮಹತ್ವದ್ದಾಗಿರುವುದು. ನಾವು ಅದಕ್ಕಾಗಿ ಪ್ರಾರ್ಥಿಸುವಷ್ಟು ನಾವು ಸಹೋದರತ್ವವನ್ನು ಪ್ರೀತಿಸುವೆವು.

ಪ್ರಾರ್ಥಿಸುವದನ್ನು ನಿಲ್ಲಿಸುವ ಸಮಯವು ಇರುವುದು! *ಭಯಪಡಿಸುವಂಥದ್ದಾಗಿದೆ!* ಮೋಶೆ ಮತ್ತು ಸಮುವೇಲರು ತಮ್ಮ ಜನರಿಗಾಗಿ ಯಶಸ್ವಿಯಾಗಿ ಪ್ರಾರ್ಥಿಸಿದರು. ಹೀಗಿದ್ದರೂ, ದೇವರು ಯೆರೆಮೀಯನಿಗೆ ಮೋಶೆ ಮತ್ತು ಸಮುವೇಲರು ಇಸ್ರಾಯೇಲಿಗಾಗಿ ಪ್ರಾರ್ಥಿಸಿದರೂ, ಜನಾಂಗದ ಪಾಪದ ಕಾರಣದಿಂದ ತಾನು ಕೇಳುವದಿಲ್ಲ ಎಂದು ಹೇಳಿದನು (ಯೆರೆಮೀಯ 15:1). ಪಾಪದಿಂದ ಕಠಿಣವಾದ ಜೀವನದಲ್ಲಿ, ಕೃಪೆಯಾಗಲೀ ಇಲ್ಲವೇ ಪ್ರಾರ್ಥನೆಯಾಗಲೀ ಮನುಷ್ಯನನ್ನು ಸ್ಪರ್ಶಿಸದೇ ಇರುವಂಥ ಒಂದು ಸಮಯವು ಬರುವುದು. ಇಸ್ರಾಯೇಲಿಗಾಗಿ ಪ್ರಾರ್ಥಿಸಬಾರದು ಎಂದು ದೇವರು ಯೆರೆಮೀಯನಿಗೆ ಪುನಃ ಪುನಃ ಹೇಳಿದನು. ಯೆರೆಮೀಯನು ಬಯಸಿದ್ದನು, ಆದರೆ ದೇವರು

ಮಾಡಕೂಡದ್ದೆಂದು ವಿಧಿಸಿದನು! ಅತೀ ಕಷ್ಟಕರವಾದ ಪರಿಶುದ್ಧ ಬರಹಗ ಳಲ್ಲಿ ಒಂದರಲ್ಲಿ, ಕೆಲವರಿಗಾಗಿ ಪ್ರಾರ್ಥಿಸಬೇಕು ಮತ್ತು ಇತರರಿಗಾಗಿ ಪ್ರಾರ್ಥಿಸಬಾರದು ಎಂದು ಯೋಹಾನನು ಹೇಳಿದನು (1 ಯೋಹಾನ 5:16). ಈ ವಾಕ್ಯಭಾಗವನ್ನು ಆಳ ವಾಗಿ ಅಧ್ಯಯನ ಮಾಡಿರಿ. ಆ ಪಾಪದಿಂದ ಕಠಿಣವಾದ ಸಮಯವು ಬರುವವರೆಗೆ, ಹಳೇ ಕಾಲದ ಸಮುವೇಲನು ಮಾಡಿದಂತೆ ಮಾಡಿರಿ ಮತ್ತು ಪ್ರಾರ್ಥಿಸಿರಿ! ಪ್ರಾರ್ಥನೆಯು ನಮ್ಮನ್ನು ಬದಲಾಯಿಸುವದನ್ನು ಕುರಿತದ್ದಕ್ಕಾಗಿರುವದಕ್ಕಿಂತ, ಜಗತ್ತನ್ನು ಬದಲಾಯಿಸುವಂಥದ್ದರ ಬಗ್ಗೆ ಕಡಿಮೆಯಾಗಿರುತ್ತದೆ.

## ಕ್ರಿಸ್ತನ ಆದರ್ಶ

ಪ್ರಾರ್ಥಿಸುವದನ್ನು ನೀವು ಹೇಗೆ ಕಲಿತುಕೊಂಡಿರಿ? ಎಲ್ಲಿ? ಹೇಗೆ ಪ್ರಾರ್ಥಿಸಬೇಕು ಎಂಬುದನ್ನು ಕಲಿತುಕೊಳ್ಳಲು ಕ್ರೈಸ್ತರು ಬೈಬಲಿನಕಡೆಗೆ ಹೊರಳುತ್ತಾರೆ. “ಪ್ರಾರ್ಥನೆಯ ಮನುಷ್ಯನಾದ” ಯೇಸುವಿನಿಂದ ನಾವು ಕಲಿತುಕೊಳ್ಳುತ್ತೇವೆ. ಇಡೀ ರಾತ್ರಿ ಆತನು ಪ್ರಾರ್ಥಿಸಿದನು (ಲೂಕ 6:12). ಪ್ರಾರ್ಥನೆಯು ಯೇಸುವನ್ನು ತಿಳಿಯುವದರ ಬಗ್ಗೆ ಇರುತ್ತದೆ. ಆತನು ಇತರರಿಗಾಗಿ, ವಿಶೇಷವಾಗಿ ಹನ್ನೆರಡು ಜನರಿಗಾಗಿ ಪ್ರಾರ್ಥಿಸಿದನು. ಯೋಹಾನ 17ರಲ್ಲಿ ಯೇಸು ಪುನಃ ಪ್ರಾರ್ಥಿಸಿದನು - ಹನ್ನೆರಡು ಜನರಿಗಾಗಿ ಮಾತ್ರವಷ್ಟೇ ಅಲ್ಲ, ಆದರೆ ಸಮನಾಗಿ ನಮಗಾಗಿಯೂ ಪ್ರಾರ್ಥಿಸಿದನು! ನಾವೆಲ್ಲರೂ ಒಂದಾಗಿರಬೇಕೆಂದು ಪ್ರಾರ್ಥಿಸಿದನು. ಸಭೆಯು ಒಂದಾಗಿರುವವರೆಗೆ ಜಗತ್ತು ಎಂದೂ *ಜಯಿಸಲ್ಪಡುವದಿಲ್ಲ*! (ನೀವು ಪ್ರಾರ್ಥಿಸಲಾರದವರೆಗೆ ಪ್ರಾರ್ಥಿಸಿರಿ.)

ಲೂಕ 22ರಲ್ಲಿ ನಮ್ಮ ಪಠ್ಯಕ್ಕೆ ಹಿಂದಿರುಗೋಣ. ಪೇತ್ರನು ಬೀಳುವನೆಂದು ತಿಳಿದಿದ್ದರೂ ಕ್ರಿಸ್ತನು ಅವನಿಗಾಗಿ ಪ್ರಾರ್ಥಿಸಿದನು! ಇದು ಪರಾರ್ಥ ವಿಜ್ಞಾಪನೆಯ ಒಂದು ಸಮಸ್ಯೆಯನ್ನು ಬಹಿರಂಗ ಪಡಿಸುತ್ತದೆ! ದೇವರ ಸಾರ್ವಭೌಮತೆಯು ಮಾನವನ ಸ್ವತಂತ್ರ ನೈತಿಕತೆಯ ಮಧ್ಯವರ್ತಿಯನ್ನು ಕಡೆಗಣಿಸುವದಿಲ್ಲ! ನನ್ನ ಅಪೇ ಕ್ಷೆಯು ಇನ್ನೊಬ್ಬನ ಮನಸ್ಸಾಕ್ಷಿಯ ಮೇಲೆ ಅಧಿಕಾರ ನಡಿಸುವದಿಲ್ಲ. ಪ್ರಾರ್ಥನೆಯನ್ನು ಮಾಯಾಜಾಲಕ್ಕೆ ಕೆಳಗಿಳಿಸಬೇಡಿರಿ: “ಇಂದು ನನ್ನ ಹೆಂಡತಿಯನ್ನು ಪರಿಪೂರ್ಣಳನ್ನಾಗಿ ಮಾಡು!” ಇದು ವಿಶ್ವಾಸವಾಗಿರುವದಿಲ್ಲ; ಇದು ಪ್ರಾರ್ಥನೆಯಾಗಿರುವದಿಲ್ಲ. ಇದು ಮೋಡಿ ಯಾಗಿದೆ, ಆರಾಧನೆಯಾಗಿರುವದಿಲ್ಲ. ಇದು ಬಲದ ಯಾತ್ರೆಯಾಗಿದೆ, ಯೇಸುವಿನ ಒಡೆತನಕ್ಕೆ ಒಪ್ಪಿಸಿಕೊಳ್ಳುವಿಕೆಯಾಗಿರುವದಿಲ್ಲ. ಇದು ಮೂಢನಂಬಿಕೆಯಾಗಿದೆ, ದೇವರೊಂದಿಗೆ ಆಳವಾದ, ವೈಯಕ್ತಿಕ ಸಂಬಂಧವಾಗಿರುವದಿಲ್ಲ.

ಈ ಕಾರಣದಿಂದ “ಹೌ-ಟು” ಪುಸ್ತಕಗಳು ಸೋತುಹೋಗುತ್ತವೆ. ಕ್ರೈಸ್ತತ್ವವು ನಂಬಿಕೆಯಾಗಿದೆ - “ಪಾಕವಿಧಾನ ದೈವಜ್ಞಾನ ಶಾಸ್ತ್ರವಾಗಿರುವದಿಲ್ಲ.” ಪ್ರಾರ್ಥನೆಯು ಉತ್ತಮ ಪಾಕವಿಧಾನ ಕಾರ್ಯವಿಧಾನ, ಒಂದು ಸೂತ್ರ ಆಗಿರುವದಿಲ್ಲ. ಪ್ರಾರ್ಥನೆಯು ದೇವರಿಗೆ ಮತ್ತು ಆತನ ಚಿತ್ತಕ್ಕೆ ಒಪ್ಪಿಸಿಕೊಡುವಿಕೆಯಾಗಿದೆ. ಪ್ರಾರ್ಥನೆಯು ಒಂದು ಹೋರಾಟವಾಗಿದೆ, “ಪ್ರಾಣದ ವ್ಯಾಯಾಮ ಶಾಲೆಯಾಗಿದೆ.” ಸ್ವಾರ್ಥಸಾಧನೆಯನ್ನಲ್ಲ ಆದರೆ ದಿನಾಲೂ ಮರಣವನ್ನು ಅನುಸರಿಸಬೇಕೆಂದು ದೇವರು ಬಯಸುತ್ತಾನೆ (1 ಕೊರಿಂಥ 15:31). ಮೊದಲಿನದು ಮರಣಕ್ಕೆ ನಡಿಸುತ್ತದೆ; ಅನಂತರದ್ದು ಜೀವಕ್ಕೆ ನಡಿಸುತ್ತದೆ. ನಮ್ಮ ಸುಖದಲ್ಲಿಯಕ್ಕಿಂತ ಹೆಚ್ಚಾಗಿ ದೇವರು ನಮ್ಮ ಪರಿಶುದ್ಧತೆಯಲ್ಲಿ ಆಸಕ್ತನಾಗಿದ್ದಾನೆ.

*ಪ್ರಶ್ನೆಯ ಸಮಯ!* ನನ್ನ ಸ್ವಂತ ಪ್ರಾರ್ಥನೆಯಲ್ಲಿ, ನಾನು ನನ್ನ ಸೆರೆಯವನ ಜೀವಿ ತವನ್ನು ಬದಲಾಯಿಸಬಹುದೋ? ಅವನು ಕೇಳಿಕೊಳ್ಳದಿದ್ದರೂ ನಾನು ಅವನಿಗಾಗಿ

ಪ್ರಾರ್ಥಿಸಬಹುದೋ? ನಾನು ಪ್ರಾರ್ಥನೆ ಮಾಡಬಾರದೆಂದಾಗಲೂ ಅವನಿಗಾಗಿ ಪ್ರಾರ್ಥಿಸಬಹುದೋ? ಹೌದು! ಎಲ್ಲಾ ಕಡೆಗಳಲ್ಲಿಯೂ ಎಲ್ಲಾ ಜನರಿಗಾಗಿಯೂ ಪ್ರಾರ್ಥಿಸಿರಿ (1 ತಿಮೊಥೆ 2:1, 2). ಅವರು ಪಾಪ ಮಾಡುವಾಗಲೂ ಪ್ರಾರ್ಥಿಸಿರಿ. ತಾನು ಪ್ರಾರ್ಥನೆ ಮಾಡುವದನ್ನು ನಿಲ್ಲಿಸಿದರೆ ತಾನು ಪಾಪಮಾಡುವವನಾಗಿದ್ದೇನೆ ಎಂದು ಸಮುವೇಲನು ಹೇಳಿದನು (1 ಸಮುವೇಲ 12:23). ನಮಗೆ ಸಂಪೂರ್ಣವಾದ ಸ್ವಾತಂತ್ರವಿರುವದಿಲ್ಲ. ಸಮುದ್ರ ತೀರದಲ್ಲಿ ಬೆಣಚು ಕಲ್ಲುಗಳಿಗಿಂತ ಹೆಚ್ಚು ನಿಕಟವಾಗಿ ಜನರು ಒಂದುಗೂಡಿಸಲ್ಪಟ್ಟಿರುವರು ಬೆಣಚು ಕಲ್ಲುಗಳು ಕೇವಲ ಸ್ಪರ್ಶಿಸುತ್ತವೆ. ಜನರು ಹೊಲದಲ್ಲಿಯ ಬೇರುಗಳಂತೆ ಸುತ್ತಿಕೊಂಡಿರುತ್ತಾರೆ. ಮಾತಾಡಲ್ಪಟ್ಟ ಪ್ರತಿಯೊಂದು ಪದ, ಬರೆಯಲ್ಪಟ್ಟ ಪುಸ್ತಕ, ಮತ್ತು ಮಾಡಲ್ಪಟ್ಟಕೆಲಸ ನನ್ನ ಏಕಾಂತತೆಯ ಅತಿಕ್ರಮಣ ವಾಗಿದೆ. ಒಬ್ಬರೊಬ್ಬರ ಪ್ರಾರ್ಥನೆಯ ಮೇಲೆ ನಾವು ಯಾಕೆ ಅವಲಂಭಿಸಬಾರದು?

ವೈರಿಗಳಿಗಾಗಿ ಪ್ರಾರ್ಥನೆ (ಮತ್ತಾಯ 5:44). ವೈರಿಯನ್ನು ದ್ವೇಷಿಸುವದರ ಬದಲು, ಅವನಿಗಾಗಿ ಪ್ರಾರ್ಥಿಸಿರಿ. ಪರಾರ್ಥ ಪ್ರಾರ್ಥನೆಯು ಸುವಾರ್ತಾ ಸೇವೆಯನ್ನೂ ಒಳಗೊಂಡಿರುವುದು. “ಹೀಗಿರಲು ನೀವು ಸ್ವಸ್ಥವಾಗಬೇಕಾದರೆ, ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ; ನೀತಿ ವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹುಬಲವಾಗಿದೆ” ಎಂದು ಯಾಕೋಬ 5:16 ಹೇಳುತ್ತದೆ. ಪ್ರಾರ್ಥನೆ ಮತ್ತು ದೇವರ ಪರಿಪಾಲನೆ ಎರಡೂ ಒಂದಾಗಿ ಕೂಡಿಸಲ್ಪಟ್ಟಿರುತ್ತವೆ (ಕೊಲೊಸ್ಸೆ 4:3). ಪ್ರಾರ್ಥನೆಗಳಿಗೆ ಉತ್ತರ ಕೊಡುವದರಿಂದ ದೇವರು ಬಾಗಿಲುಗಳನ್ನು ತೆರೆಯುತ್ತಾನೆ. ಪ್ರಾರ್ಥನೆಗಳು ಉತ್ತಮ ಕೆಲಸಗಳನ್ನು ಬಲಪಡಿಸುತ್ತವೆ (2 ಕೊರಿಂಥ 1:11). ಕ್ರಿಸ್ತನ ಹೃದಯವು ಪರಾರ್ಥ ವಿಜ್ಞಾಪನೆಯಾಗಿದೆ; ಕ್ರೈಸ್ತತ್ವದ ಹೃದಯವು ಪರಾರ್ಥ ವಿಜ್ಞಾಪನೆಯಾಗಿರುತ್ತದೆ.

## ಪೌಲನ ಪ್ರಾರ್ಥನೆಯ ಯಾದಿ

ಜಗತ್ತು “ಯಾದಿ”ಗಳಿಂದ ... ಐಶ್ವರ್ಯದಿಂದ, ಸೌಂದರ್ಯದಿಂದ, ಪ್ರಸಿದ್ಧಿಯಿಂದ ಮರುಳುಗೊಳಿಸಲ್ಪಟ್ಟಿದೆ. ಒಬ್ಬ ಟಿ. ವಿ ತಾರೆಗೆ ಅವನ “ಟಾಪ್ ಟೆನ್ ಲಿಸ್ಟ್” ಇರುತ್ತದೆ. ಅಂಥ ಯಾದಿಗಳು ಕುತೂಹಲ ಕಾರಿಯಾಗಿರುತ್ತವೆ, ಆದರೆ ಅವು ನಿಜವಾಗಿಯೂ ಬೆಲೆಯಿಲ್ಲದವುಗಳಾಗಿರುತ್ತವೆ. ಪೌಲನಲ್ಲಿ ಒಂದು ಯಾದಿ ಇತ್ತು. ಅವನದು ಪ್ರಾರ್ಥನೆಯ ಯಾದಿಯಾಗಿತ್ತು. ಆ ಯಾದಿಯಲ್ಲಿ ನೀನು ಒಬ್ಬನಾಗಿರಲು ಬಯಸುತ್ತೀಯೋ? ಅವನು ಇತರರಿಗಾಗಿ ಪ್ರಾರ್ಥಿಸಿದನು; ಅವರು ತನಗಾಗಿ ಪ್ರಾರ್ಥಿಸಬೇಕೆಂದು ಕೇಳಿಕೊಂಡನು (ಕೊಲೊಸ್ಸೆ 4:3). ತಪ್ಪಿಹೋದವರಿಗಾಗಿ ಪೌಲನು ಪ್ರಾರ್ಥಿಸಿದನು (ರೋಮಾಪುರ 9; 10). ಪೌಲನು ನಿರ್ದಿಷ್ಟತೆಯುಳ್ಳವನಾಗಿದ್ದನು, ಸಾಮಾನ್ಯವಾಗಿರಲಿಲ್ಲ. ಅವನು ಸಹೋದರರರನ್ನು ಮತ್ತು ಸಭೆಗಳನ್ನು ಅವರ ಹೆಸರಿನಿಂದ ಕರೆದನು.

ಸಹೋದರರಿಗಾಗಿ ಅವನು ಪ್ರಾರ್ಥಿಸಿದನು. ನಿಜವಾದ ಪ್ರಾರ್ಥನೆಗೆ ಮಾರ್ಪಾಟಗೊಂಡ ಯಾವುದೇ ಸಭೆಯು ಸಭೆಯನ್ನು ಮಾರ್ಪಡಿಸುವುದು. ಪೌಲನು ಸಭೆಗಾಗಿ ಚಿಂತಿಸಿದನು (2 ಕೊರಿಂಥ 11:28). ಅವನು ಪ್ರಾರ್ಥಿಸಿದನು; ಅವನು ಟೀಕೆ ಮಾಡಲಿಲ್ಲ ಇಲ್ಲವೇ ಗುಸುಗುಟ್ಟಲಿಲ್ಲ. ನಾವು ಪ್ರಸಂಗಿಗಳಿಗಾಗಿ, ಹಿರಿಯರಿಗಾಗಿ, ಶಿಕ್ಷಕರಿಗಾಗಿ, ಮತ್ತು ಡೀಕನರಿಗಾಗಿ ಪ್ರಾರ್ಥಿಸತಕ್ಕದ್ದು. ಶಿಕ್ಷಕರೇ, ನಿಮ್ಮ ವಿದ್ಯಾರ್ಥಿಗಳಿಗಾಗಿ ಪ್ರಾರ್ಥಿಸುವಿರೋ? ಯೇಸುವಿನ ಸಹೋದರನಾದ ಯಾಕೋಬನು “ಹಳೇ ಒಂಟೆ - ಮೊಣಕಾಲೂಗಳು” ಎಂದು ಕರೆಯಲ್ಪಟ್ಟನು. ಯಾಕಂದರೆ ಸಹೋದರರಿಗಾಗಿ ಅವನು ಅಷ್ಟು ಪ್ರಾರ್ಥನೆ ಮಾಡಿದನು.

ಪೌಲನು ಸರಕಾರಕ್ಕಾಗಿ ಪ್ರಾರ್ಥಿಸಿದನು (1 ತಿಮೊಥೆ 2:1-3). ಅನಂತರದಲ್ಲಿ ತನ ಶಿರಚ್ಛೇದನ ಮಾಡಿದ ಸೀಜರನಿಗಾಗಿ ಪೌಲನು ಪ್ರಾರ್ಥಿಸಿದನು. ಅವನು ಮರಣ ಹೊಂದಿದ ದಿನ ಸೀಜರನಿಗಾಗಿ ಅವನು ಪ್ರಾರ್ಥಿಸಿದನೆಂದು ನೀವು ಯೋಚಿಸುವದಿಲ್ಲವೋ? ಇನ್ನೊಬ್ಬನ ಕಡೆಗೆ ಅವನಿಗಾಗಿ ಪ್ರಾರ್ಥಿಸುವಷ್ಟು ಸರಿಯಾದ ಮನೋಭಾವನೆಯನ್ನು ಯಾವುದೂ ಕೊಡುವದಿಲ್ಲ. ನನಗಾಗಿ ಪ್ರಾರ್ಥಿಸಿರಿ.

ಕರ್ತನೇ, ದಿನದಿಂದ ದಿನಕ್ಕೆ ಜೀವಿಸಲು ನನಗೆ ಸಹಾಯಮಾಡು
ಸ್ವಾರ್ಥವನ್ನು ಮರೆತುಬಿಡುವಂಥ ಮಾರ್ಗದಲ್ಲಿ,
ನಾನು ಪ್ರಾರ್ಥಿಸಲು ಮೊಣಕಾಲೂಗಳನ್ನೂರುವಾಗಲೂ ಸಹ,
ನನ್ನ ಪ್ರಾರ್ಥನೆಗಳು ಇತರರಿಗಾಗಿ ಇರುವವು.

***"ಕರ್ತನೇ, ನಾನು ಪ್ರಾರ್ಥನೆಯಲ್ಲಿ ನಂಬುವದಿಲ್ಲ.***
***ನಾನು ನಿನ್ನಲ್ಲಿ ನಂಬುತ್ತೇನೆ.***
***ನಂಬಿಕೆಯಲ್ಲಿ ಪ್ರಾರ್ಥಿಸುವದನ್ನು ನನಗೆ ಕಲಿಸು."***

© 2009 Truth for Today